ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 29 ಡಿವಿಪಿ[2] 2018

ನಿರ್ದೇಶಕರವರಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 17-12-2018.

# ಸುತ್ತೋಲೆ

ವಿಷಯ : 2019-20ನೇ ಶೈಕ್ಷಣಿಕ ಸಾಲಿನ ಪ್ರವೇಶಾನುಮೋದನೆ (AICTE Approval Process) ವಿಸ್ತರಣೆಗೆ ಸಂಬಂಧಿಸಿದಂತೆ ಕಾರ್ಯಾಗಾರವನ್ನು ಹಮ್ಮಿಕೊಂಡಿರುವ ಬಗ್ಗೆ.

~ ***** ~

2019-20ನೇ ಶೈಕ್ಷಣಿಕ ವರ್ಷದ ಪ್ರವೇಶಾನುಮೋದನೆ ವಿಸ್ತರಣೆಗೆ ಸಂಬಂಧಿಸಿದಂತೆ,ರಾಜ್ಯದ ಸುಮಾರು ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಮೂಲ ಸೌಕರ್ಯಗಳಾದ Infrastructure ಇನ್ನಿತರೆ ಕೊರತೆ ಇರುವುದಾಗಿ ಸೂಚಿಸಿ, ಸದರಿ ಸಂಸ್ಥೆಗಳ ಪ್ರವೇಶಾನುಮೋದನೆ ವಿಸ್ತರಣೆಯನ್ನು ರದ್ದುಪಡಿಸುವಂತೆ ಶಿಫಾರಸ್ಸು ಮಾಡಿರುವುದಾಗಿ ತಿಳಿದು ಬಂದಿದ್ದು, ಈ ವಿಷಯವನ್ನು ಇಲಾಖೆಯು ಅತ್ಯಂತ ಗಂಭೀರವಾಗಿ ಪರಿಗಣಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು /ಪಾಲಿಟೆಕ್ನಿಕ್‌ಗಳು, ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು /ಪಾಲಿಟೆಕ್ನಿಕ್‌ಗಳು ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ AICTE ಯ Scrutiny Committeeಯು ಗುರುತಿಸಲ್ಪಟ್ಟ ನ್ಯೂನ್ಯತೆಗಳ ಬಗ್ಗೆ ಚರ್ಚಿಸಲು **ದಿನಾಂಕ : 22-12-2018** ರಂದು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

Approval Bureau of AICTE Scrutiny Committeeಯು ಈಗಾಗಲೇ 2019-20ನೇ ಶೈಕ್ಷಣಿಕ ಸಾಲಿನ ಪ್ರವೇಶಾನುಮೋದನೆ ವಿಸ್ತರಣೆಗೆ ಸಂಬಂಧಿಸಿದಂತೆ, ಸಂಸ್ಥೆಗಳಲ್ಲಿ ಗುರುತಿಸಲಾದ ನ್ಯೂನ್ಯತೆಗಳಿಂದಾಗಿ ಪ್ರವೇಶಾನುಮೋದನೆ ವಿಸ್ತರಣೆಯನ್ನು ರದ್ದುಪಡಿಸುವಂತೆ, ಪ್ರವೇಶಾತಿ ಕಡಿತಗೊಳಿಸುವಂತೆ ಹಾಗೂ EVC ಗೆ ಶಿಫಾರಸ್ಸು ಮಾಡಲ್ಪಟ್ಟಿರುವ ಸಂಸ್ಥೆಗಳ ಪ್ರಾಚಾರ್ಯರುಗಳು ಸಂಸ್ಥೆಗಳಲ್ಲಿ ಗುರುತಿಸಲ್ಪಟ್ಟ ಸದರಿ ನ್ಯೂನ್ಯತೆಗಳನ್ನು ಸರಿಪಡಿಸುವಲ್ಲಿ ಪ್ರಾಂಶುಪಾಲರ ಹಂತದಲ್ಲಿಯೇ ಕೈಗೊಂಡ ಕ್ರಮಗಳ ವರದಿ ಹಾಗೂ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ವರದಿಯೊಂದಿಗೆ ಸದರಿ ಕಾರ್ಯಾಗಾರಕ್ಕೆ ಸದರಿ ಸಂಸ್ಥೆಗಳ ಪ್ರಾಚಾರ್ಯರುಗಳು **ಕಡ್ಡಾಯವಾಗಿ** ಹಾಜರಿರುವಂತೆ ಸೂಚಿಸಿದೆ. ತಪ್ಪಿದ್ದಲ್ಲಿ ಮುಂದೆ ಉಂಟಾಗುವ ಲೋಪಗಳಿಗೆ ತಾವೇ ನೇರವಾಗಿ ಹೊಣೆಗಾರರಾಗುವುದಾಗಿ ಈ ಮೂಲಕ ತಿಳಿಸಲಾಗಿದೆ.

***ಕಾರ್ಯಾಗಾರನಡೆಯುವ ಸ್ಥಳ :***

ಬಿ.ಎಂ.ಎಸ್. ಇಂಜಿನಿಯರಿಂಗ್‌ಕಾಲೇಜು ಸಭಾಂಗಣ,
ಬಸವನಗುಡಿ, ಬೆಂಗಳೂರು-560006

***ಸಮಯ:*** ಬೆಳಿಗ್ಗೆ 10.00 ಗಂಟೆಗೆ.

***ದಿನಾಂಕ*** : 22-12-2018

ನಿರ್ದೇಶಕರು
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.
18/12/18

***ಪ್ರತಿಯನ್ನು :***

1. ಸರ್ಕಾರಿಇಂಜಿನಿಯರಿಂಗ್ ಕಾಲೇಜುಗಳು /ಪಾಲಿಟೆಕ್ನಿಕ್‌ಗಳು, ಅನುದಾನಿತಇಂಜಿನಿಯರಿಂಗ್ ಕಾಲೇಜುಗಳು /ಪಾಲಿಟೆಕ್ನಿಕ್‌ಗಳು ಹಾಗೂ **ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರಿಗೆ.**